ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀಮತಿ ರೀಟಾ ಸೀಲ್ ಮತ್ತು ಮತ್ತೊಬ್ಬರು -ವಿರುದ್ಧ-ಶ್ರೀ ನಲ್ಲತಂಬಿ ಡಿ ಮತ್ತು ಇತರರು

ಎಮ್.ಎಫ್.ಎ.ಸಂಖ್ಯೆ:2383/2013 (ಎಮ್ವಿ) ಜೊತೆಗೆ ಇತರೆ, ದಿನಾಂಕ 21 ನೇ ಜೂನ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಮತ್ತು ಐತೀರ್ಪು ಈ ಎರಡೂ ಅಪೀಲುಗಳಿಗೆ ಕಾರಣವಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಆಲಿಸಿ, ಈ ಆದೇಶದ ಮೂಲಕ ಅಂತಿಮವಾಗಿ ವಿಲೇವಾರಿ ಮಾಡಲಾಗಿದೆ.

2. ಕೇಮುದಾರ-ಅಪೀಲುದಾರರು, ಮೃತ ದೀಪಂಕರ್ ಸೀಲ್ರುವರ ಕಾನೂನು ಸಮ್ಮತ ಪ್ರತಿನಿಧಿಗಳಾಗಿದ್ದು, ನ್ಯಾಯಾಧಿಕರಣ ನೀಡಿದ ಪರಿಹಾರವನ್ನು ಹೆಚ್ಚಿಸಲು ಕೋರಿ ಎಮ್ಎಫ್ ಸಂ .2383/2013 ರಲ್ಲಿ ಅಪೀಲನ್ನು ಸಲ್ಲಿಸಿರುತ್ತಾರೆ ಮತ್ತು ಅಪೀಲುದಾರ ವಿಮಾದಾರ-ಮೆಸರ್ ರಿಲಾಯನ್ಸ್ ಜನರಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್, ನ್ಯಾಯಾಧಿಕರಣವು ನೀಡಿದ ಪರಿಹಾರದ ಪ್ರಮಾಣ ಮತ್ತು ಹೊಣೆಗಾರಿಕೆಯನ್ನು ಪ್ರಶ್ನಿಸಿ ಎಮ್.ಎಫ್.ಎ. ಸಂ .4448/2013 ರಲ್ಲಿ ಅಪೀಲನ್ನು ಸಲ್ಲಿಸಿರುತ್ತಾರೆ.ನ್ಯಾಯಾಧಿಕರಣವು, ಎಮ್.ವಿ.ಸಿ. ಸಂ .7633/2011 ರಲ್ಲಿದಿನಾಂಕ: 15.12.2012 ರ ತನ್ನ ತೀರ್ಪು ನೀಡುವ ಮೂಲಕ ಕೇಮುದಾರರಿಗೆ-ಮೃತನ ಕಾನೂನು ಸಮ್ಮತ ಪ್ರತಿನಿಧಿಗಳಿಗೆ ರೂ .14,26,836/-ಗಳ ನಷ್ಟ ಪರಿಹಾರವನ್ನು ನೀಡಿರುತ್ತದೆ.ಸದರಿ ನಷ್ಟ ಪರಿಹಾರದಿಂದ ತೃಪ್ತಿಯೊಂದದ ಕ್ಲೇಮುದಾರರು ಎಮ್.ಎಫ್.ಎ.ಸಂ .2383/2013 ನ್ನು ಸಲ್ಲಿಸಿದ್ದು, ಪರಿಹಾರವನ್ನು ಹೆಚ್ಚಿಸಲು ಕೋರಿರುತ್ತಾರೆ ಮತ್ತು ಮೃತನ ವಾಜಯೋಗ್ಯ ನಿರ್ಲಕ್ಷ್ಯವು ಶೇಕಡ 20 ರಷ್ಟಿದೆ ಎಂದು ಆರೋಪಿಸಿರುವ ನ್ಯಾಯಾಧೀಕರಣದ ನಿರ್ಣಯವನ್ನು ರದ್ದುಪಡಿಸಬೇಕೆಂದು ಮುಂದುವರಿದು ಕೋರಿರುತ್ತಾರೆ.

3. ಎಮ್.ಎಫ್.ಎ.ಸಂ .2383/2013 ರಲ್ಲಿ ಕ್ಲೇಮುದಾರರು-ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಮತ್ತು ಎಮ್.ಎಫ್.ಎ.ಸಂ .4448/2013-ಮೆಸರ್ ರಿಲಯನ್ಸ್ ಜನರಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ನ ಅಪೀಲುದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಸಹ ಆಲಿಸಿದ್ದೇವೆ ಮತ್ತು ಪ್ರಶ್ನಿತ ತೀರ್ಪು ಮತ್ತು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಅವಗಾಹಿಸಿರುತ್ತೇನೆ.

4. ಪ್ರಕರಣ ವಾಸ್ತವಿಕ ಅಂಶವೇನೆಂದರೆ ದಿನಾಂಕ 11.07.2011 ರಂದು ರಾತ್ರಿ ಸುಮಾರು 11.15 ಗಂಟೆಗೆ ದೀಪಾಂಕರ್ ಸೀಲ್ರುವರು ನೋಂದಣಿ ಸಂಖ್ಯೆ ಕೆ.ಎ .02-ಇಡಿ -5082 ಹೊಂದಿದ್ದ ತನ್ನ ಬಜಾಜ್ ಸ್ಕೂಟರ್ನಲ್ಲಿ ಬೆಂಗಳೂರಿನಿಂದ ಹೊಸೂರು ಕಡೆಗೆ ಹೋಗುತ್ತಿದ್ದಾಗ, ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಹೋಬಳಿಯ ನೆರಳೂರು ಬಳಿಯ ಪೆರುಮಾಳ್ ಸ್ಟೋರ್ನ ಮುಂಭಾಗ ಹೋಗುತ್ತಿದ್ದ ಸಮಯದಲ್ಲಿ, ನೋಂದಣಿ ಸಂಖ್ಯೆ ಟಿ.ಎನ್-28.ಎಪಿ -9333 ಹೊಂದಿದ್ದ ಲಾರಿಯ ಚಾಲಕನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಯಾವುದೇ ಮುನ್ಸೂಚನೆಯನ್ನು ನೀಡದೆ ಲಾರಿಯನ್ನು ಇದ್ದಕ್ಕಿದ್ದಂತೆ ನಿಲ್ಲಿಸಿದ್ದಾನೆ ಇದರ ಪರಿಣಾಮವಾಗಿ, ಸ್ಕೂಟರ್ ಲಾರಿಗೆ ಡಿಕ್ಕಿ ಹೊಡೆದಿದ್ದು, ದೀಪಾಂಕರ್ ಸೀಲ್ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ.ಅಪಘಾತ

ಸಂಭವಿಸಿದ ತಕ್ಷಣವೇ ಆತನನ್ನು ಅತ್ತಿಬೆಲೆಯ ಜನರಲ್ ಆಸ್ಪತ್ರೆಗೆ ಸೇರಿಸಲಾಯಿತು ಮತ್ತು ತದನಂತರ ಆತನನ್ನು ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಲಾಯಿತು ಮತ್ತು ಇಲ್ಲಿ ಆತನು ದಿನಾಂಕ 11.07.2011 ರಿಂದ 21.07.2011 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾನೆ.ಮುಂದುವರೆದು, ಆತನನ್ನು ಎಮ್.ಎಸ್.ರಾಮಯ್ಯ ಆಸ್ಪತ್ರೆಗೆ ಸೇರಿಸಲಾಯಿತು ಮತ್ತು ಅಲ್ಲಿ ದಿನಾಂಕ 08.08.2011 ರವರೆಗೆ ಚಿಕಿತ್ಸೆಯನ್ನು ಪಡೆದುಕೊ ಂ ಡನು, ಆದರೆ ಅದೇ ದಿನ ಆತನು ಮಾರಣಾಂತಿಕವಾಗಿ ಗಾಯಗೊಂಡಿದ್ದರಿಂದ ಮೃತನಾದನು.ಆದ್ದರಿಂದ, ವೈದ್ಯಕೀಯ ವೆಚ್ಚಗಳಿಗೆ ಅತೀವ ಮೊತ್ತವನ್ನು ಖರ್ಚು ಮಾಡಿದರೂ ಸಹ ಯಾವುದೇ ಪ್ರಯೋಜನವಾಗಲಿಲ್ಲ.ಅಪಘಾತಕ್ಕೂ ಮುಂಚೆ, ಮೃತನು ಸರ್ಟಿಫೈಡ್ ಕ್ಯಾಲಿಬ್ರೇಷನ್ ಕನ್ಸಲ್ಟೆಂಟ್ ವೃತ್ತಿಯನ್ನು ಮಾಡುತ್ತಿದ್ದನು ಮತ್ತು ವರ್ಷಕ್ಕೆ 3 ಲಕ್ಷ ರೂಗಳನ್ನು ಸಂಪಾದಿಸುತ್ತಿದ್ದನು.ಅಪೀಲುದಾರರು-ಕ್ಲೇಮುದಾರರು ಮೃತನ ಆದಾಯದ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದರು.ಮೃತನ ಅಕಾಲಿಕ ಮರಣದಿಂದಾಗಿ, ಕ್ಲೇಮುದಾರರು ಭಾರೀ ಸಂಕಷ್ಟಕ್ಕೆ ಒಳಗಾಗಿದ್ದು, ನ್ಯಾಯಾಧಿಕರಣದ ಮುಂದೆ ಪರಿಹಾರವನ್ನು ಕೋರಿ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ.

5. ನೋಟೀಸು ಸ್ವೀಕರಿಸಿದ ನಂತರ, ಅಪಘಾತಕ್ಕೀಡಾದ ಲಾರಿ-ಪ್ರತ್ಯರ್ಜಿದಾರ ಸಂ .1 ರ ಚಾಲಕನಾಗಲೀ ಅಥವಾ ಅಪಘಾತಕ್ಕೀಡಾದ ಲಾರಿ-ಪ್ರತ್ಯರ್ಜಿದಾರ ಸಂ .2 ರ ಮಾಲೀಕನಾಗಲಿ ಹಾಜರಾಗಿರುವುದಿಲ್ಲ ಮತ್ತು ಇದರಿಂದಾಗಿ ಅವರುಗಳನ್ನು ಏಕಪಕ್ಷೀಯವಾಗಿ ಇರಿಸಲಾಗಿದೆ.ಆದಾಗ್ಯೂ, ಪ್ರತ್ಯರ್ಜಿದಾರ ಸಂ .3-ವಿಮಾ ಕಂಪನಿಯು ನ್ಯಾಯವಾದಿಯ ಮೂಲಕ ಹಾಜರಾಗಿದ್ದು, ಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಪಘಾತಕ್ಕೀಡಾದ ಲಾರಿ ಮತ್ತು ಅದರ ಹೊಣೆಗಾರಿಕೆಗೆ ಸಂಬಂಧಿಸಿದಂತಹ ಪಾಲಿಸಿಯನ್ನು ಒಪ್ಪಿಕೊಂಡು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತದೆ.ಮೃತನು ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದರಿಂದ ಮೃತನ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿದೆ ಎಂದು ವಾದಿಸಲಾಗಿದೆ.ನ್ಯಾಯವಾದಿಯು, ಲಾರಿ ಚಾಲಕನ ಕಡೆಯಿಂದ ಅತಿವೇಗ ಮತ್ತು ನಿರ್ಲಕ್ಷ್ಯತನವಾಗಿದೆ ಎಂಬುದನ್ನು ಅಲ್ಲಗಳೆದಿದ್ದಾರೆ ಮತ್ತು ಮೃತನ ವಯಸ್ಸು, ವೃತ್ತಿ ಮತ್ತು ಆದಾಯವನ್ನು ನಿರಾಕರಿಸಿದ್ದು ಮತ್ತು ಇದರಿಂದಾಗಿ ಕ್ಲೇಮು ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

ನ್ಯಾಯಾಧಿಕರಣವು, ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳನ್ನು ಪರಿಶೀಲಿಸಿದ ತರುವಾಯ, ಅಪಘಾತವು ಮೃತನ ನಿರ್ಲಕ್ಷ್ಯದ ಕಾರಣದಿಂದ ಮತ್ತು ಮೃತನು ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಕಾರಣದಿಂದ ಸಂಭವಿಸಿದ್ದು ಅಪಘಾತಕ್ಕೆ ಕಾರಣರಾಗಿರುತ್ತಾರೆಂದು ಮೃತನ ಮೇಲೆ ಶೇಕಡ 20 ರಷ್ಟು ಸಹಾಯಕಾರಿ ನಿರ್ಲಕ್ಷ್ಯವನ್ನು ನಿಗದಿ ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತದೆ.ಆದ್ದರಿಂದ, ನ್ಯಾಯಾಧಿಕರಣವು, ಅರ್ಜಿ ಹಾಕಿದ ದಿನಾಂಕದಿಂದ ವಸೂಲು ಮಾಡುವ ದಿನಾಂಕದವರೆಗೆ ವಾರ್ಷಿಕ ಶೇಕಡಾ 6 ರ ಬಡ್ಡಿ ದರದೊಂದಿಗೆ 14,26,836/ರೂಪಾಯಿಗಳ ಮೊತ್ತದ ಪರಿಹಾರವನ್ನು ನೀಡಲು ಮುಂದುವರಿದಿರುತ್ತದೆ, ಮತ್ತು ಪ್ರತ್ಯರ್ಜಿದಾರ ಸಂ .2 ಮತ್ತು 3 – ಮಾಲೀಕ ಮತ್ತು ವಿಮಾದಾರರು ಸಂಯುಕ್ತವಾಗಿ ಮತ್ತು ಪ್ರತ್ಯೇಕವಾಗಿ ಶೇಕಡಾ 80 ರಷ್ಟು ಪರಿಹಾರ ನೀಡಬೇಕೆಂದು ನಿರ್ದೇಶಿಸಿರುತ್ತದೆ.ಅಪೀಲುದಾರರು-ಮೃತನ ಕಾನೂನು ಸಮ್ಮತ ಪ್ರತಿನಿಧಿಗಳು ಪರಿಹಾರವನ್ನು ಹೆಚ್ಚಿಸಲು ಕೋರಿ ಎಮ್.ಎಫ್.ಎ.ಸಂ .2383/2013 ನ್ನು ಸಲ್ಲಿಸಿರುತ್ತಾರೆ ಮತ್ತು ವಿಮಾ ಕಂಪನಿಯು ಎಮ್.ಎಫ್.ಎ.ಸಂ .4448/2013 ನ್ನು ಸಲ್ಲಿಸಿದ್ದು, ವಿಮಾದಾರನಿಗೆ ತನ್ನ ಹೊಣೆಗಾರಿಕೆಯಿಂದ ಸಂಪೂರ್ಣವಾಗಿ ದೋಷಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ ಮತ್ತು

ನ್ಯಾಯಾಧಿಕರಣವು ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ 0 ನೀಡಿದ ನಷ್ಟ ಪರಿಹಾರವನ್ನು ಇಳಿಸಬೇಕೆಂದು ಮುಂದುವರಿದು ಕೋರಿರುತ್ತಾರೆ.

6. ಕೇಮುದಾರರು/ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಎಮ್.ಎಫ್.ಎ.ಸಂ .2383/2013 ರಲ್ಲಿ ಮೃತನ ಮರಣದಿಂದ ಕ್ಲೇಮುದಾರರು ಅಪೀಲುದಾರರಿಗೆ ತುಂಬಲಾಗದ ನಷ್ಟವಾಗಿದೆ ಎಂದು ವಾದ ಮಂಡಿಸಿದ್ದಾರೆ.ಮೃತನ ವೈದ್ಯಕೀಯ ಚಿಕಿತ್ಸೆಯ ವೆಚ್ಚಗಳ ಸಲುವಾಗಿ ಅವರುಗಳೂ ಭಾರಿ ಮೊತ್ತವನ್ನು ಖರ್ಚು ಮಾಡಿರುತ್ತಾರೆ.ನಿಶಾನೆ ಪಿ .15 ರಲ್ಲಿ ದೃಢೀಕರಿಸಿದಂತೆ ಮೃತನು ಸರ್ಟಿಫೈಡ್ ಕ್ಯಾಲಿಬ್ರೇಷನ್ ಕನ್ಸಲ್ಟೆಂಟ್ ಆಗಿ ಪ್ರತೀ ತಿಂಗಳು 25,000/ರೂಪಾಯಿಗಳ ಮೊತ್ತದ ಸಂಬಳವನ್ನು ಪಡೆಯುತ್ತಿದ್ದರೂ ಸಹ, ನ್ಯಾಯಾಧಿಕರಣವು, ' ಅವಲಂಬನೆಯ ನಷ್ಟಕ್ಕೆ ಪರಿಹಾರ ನೀಡುವ ಸಲುವಾಗಿ ಆತನ ಆದಾಯವನ್ನು ಕೇವಲ ರೂ .15,000/-ಎಂದು ಪರಿಗಣಿಸಿ ದೋಷವೆಸಗಿದೆ ಎಂದು ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದ ಮಂಡಿಸಿದ್ದಾರೆ.ಮೃತನು 58 ವರ್ಷದವನಾಗಿದ್ದರೂ ಸಹ, ಆತನು ಒಬ್ಬ ಅನುಭವಿ ಕ್ಯಾಲಿಬ್ರೇಷನ್ ಕನ್ಸಲ್ಟಂಟ್ ಆಗಿ ಕೈತುಂಬ ಸಂಬಳ ಪಡೆಯುತ್ತಿದ್ದನು ಮತ್ತು ಆತನ ಆದಾಯವು ಹಲವು ರೀತಿಯಲ್ಲಿ ಏರಿಕೆಯಾಗುತ್ತಿತ್ತು ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ನ್ಯಾಯವಾದಿಗಳು ಮುಂದುವರಿದು ವಾದಿಸುವುದೇನೆಂದರೆ, ಸರ್ವೋಚ್ಚ ನ್ಯಾಯಾಲಯದ, ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಪ್ರಣಯ್ ಸೇಥಿ ', ಪ್ರಕರಣದಲ್ಲಿನ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಮೃತನ ಭವಿಷ್ಯತ್ತಿನ ನಿರೀಕ್ಷೆಗಳ ' ಸಂಬಂಧದಲ್ಲಿ ಶೇಕಡ 10 ರಷ್ಟನ್ನು ಸೇರಿಸಬೇಕೆಂದು ಮಾನ್ಯ ನ್ಯಾಯವಾದಿಗಳು ಕೋರುತ್ತಾರೆ.ಮುಂದುವರಿದು, ಒಟ್ಟಾರೆಯಾಗಿ ಎಲ್ಲಾ ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ಕೇವಲ 40,000/-ರೂಪಾಯಿಗಳನ್ನು ಮಂಜೂರು ಮಾಡಿದ್ದರಿಂದ, ಪ್ರಣಯ್ ಸೇಥಿ ಪ್ರಕರಣದಲ್ಲಿನ ಅದೇ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಾಂಪ್ರದಾಯಿಕ ಶೀರ್ಷಿಕೆಗಳ ' ಅಡಿಯಲ್ಲಿ ಹೆಚ್ಚುವರಿ ಮೊತ್ತವಾದ 30,000/-ರೂಪಾಯಿಗಳನ್ನು ನೀಡಬಹುದು ಮತ್ತು ಇದರಿಂದ ಒಟ್ಟು ಮೊತ್ತವು 70,000/ರೂಪಾಯಿಗಳಾಗುತ್ತದೆ ಎಂದು ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದ್ದಾರೆ.ಮೃತನ ಸಾವಿನಿಂದ ಆತನು ತನ್ನ ಆಶ್ರಿತರಾಗಿದ್ದ ಪತ್ನಿ ಮತ್ತು ಮಗಳನ್ನು ಅಗಲಿದ್ದಾರೆ ಎಂಬುದನ್ನು ಪರಿಗಣಿಸುತ್ತಾ ನ್ಯಾಯಾಧಿಕರಣವು ಮಗಳಿಗೆ ಸಂಬಂಧಿಸಿದಂತ ಮಕ್ಕಳ ಪರಿಹಾರವನ್ನು ನೀಡಬೇಕಿತ್ತು.ಆದರೆ, ನ್ಯಾಯಾಧಿಕರಣವು ಈ ಅಂಶವನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು ಮಾನ್ಯ ನ್ಯಾಯವಾದಿಗಳು ಮುಂದುವರಿದು ವಾದ ಮಂಡಿಸಿದ್ದಾರೆ.ಈ ಆಧಾರದ ಮೇಲೆ, ಅಪೀಲನ್ನು ಪುರಸ್ಕರಿಸಿ ನ್ಯಾಯಾಧಿಕರಣವು ನೀಡಲಾದ ಪರಿಹಾರವನ್ನು ಸೂಕ್ತವಾಗಿ ಹೆಚ್ಚಿಸಬೇಕೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಾರ್ಥಿಸಿರುತ್ತಾರೆ.ಮುಂದುವರಿದು, ಮೃತನಿಗೆ ಸಂಬಂಧಿಸಿದಂತೆ ಸಹಾಯಕ ನಿರ್ಲಕ್ಷ್ಯವನ್ನು ಶೇಕಡ 20 ರಷ್ಟಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ನ್ಯಾಯಾಧಿಕರಣವು ರದ್ದು ಪಡಿಸಬಹುದೆಂದು ಮತ್ತು ಶೇಕಡ 80 ರಷ್ಟರ ಬದಲು ಕ್ಲೇಮುದಾರನಿಗೆ ನೀಡಲಾದ ಸಂಪೂರ್ಣ ಪರಿಹಾರವನ್ನು ಇನ್ಸುರೆನ್ಸ್ ಕಂಪನಿಯು ಪಾವತಿಸಬೇಕೆಂದು ನಿರ್ದೇಶಿಸಬೇಕು ಎಂದು ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದ್ದಾರೆ.

7. ಕೇಮುದಾರರ ಪರ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಗಳ ವಾದವನ್ನು ಅಲ್ಲಗಳೆಯುತ್ತಾ, ಇನ್ಸುರೆನ್ಸ್ ಕಂಪನಿ ಅಪೀಲುದಾರರ ಪರವಾಗಿ, ಎಮ್.ಎಫ್.ಎ.ಸಂ .4448/2013 ರಲ್ಲಿ ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದ ಮಂಡಿಸುವುದೇನೆಂದರೆ, ಸಂಬಳದ ಪ್ರಮಾಣ ಪತ್ರವನ್ನು ನಿಶಾನೆ ಪಿ .15 ಎಂದು ಹಾಜರುಪಡಿಸಿದ್ದರೂ ಸಹ, ಅದನ್ನು ಸಾಕ್ಷದಲ್ಲಿ ರುಜುವಾತು ಪಡಿಸಿರುವುದಿಲ್ಲ, ಆದ್ದರಿಂದ, ಮೃತನ ಕಾಲ್ಪನಿಕ ಆದಾಯವು

15,000/-ರೂಪಾಯಿಗಳು ಎಂದು ನ್ಯಾಯಾಧಿಕರಣವು ತೆಗೆದುಕೊಂಡಿರುವುದು ಅತ್ಯಂತ ಅಧಿಕ ಮಟ್ಟದ್ದಾಗಿರುತ್ತದೆ.ಪ್ರಕರಣ ಹೀಗಿರುವಾಗ, ಕಾಲ್ಪನಿಕ ಆದಾಯವನ್ನು ಹೆಚ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಮೇಲಾಗಿ, ನ್ಯಾಯಾಧಿಕರಣವು, ಯಾವುದೇ ಶೀರ್ಷಿಕೆಯ ಅಡಿಯಲ್ಲಿ ನೀಡಿದ ಪರಿಹಾರವನ್ನು ಹೆಚ್ಚಿಸಲು ಸಹ ಆಗುವುದಿಲ್ಲ ಎಂಬುದಾಗಿದೆ.ಮುಂದುವರೆದು, ಮೃತನ ಕಡೆಯಿಂದ ಶೇಕಡ 20 ರಷ್ಟು ನಿರ್ಲಕ್ಷ್ಯವಾಗಿದೆ ಎಂದು ನ್ಯಾಯಾಧಿಕರಣವು ನಿಗದಿಪಡಿಸಿರುವುದು ಸಮರ್ಥನೀಯವಾಗಿದ್ದು ಅದು ಯಾವುದೇ ಹಸ್ತಕ್ಷೇಪವನ್ನು ಅಪೇಕ್ಷಿಸುವುದಿಲ್ಲವೆಂದು ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದ್ದಾರೆ.ಇದರಿಂದ, ಪ್ರಸ್ತುತ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳು ಇಲ್ಲವಾದ್ದರಿಂದ ಅದನ್ನು ವಜಾಗೊಳಿಸಬೇಕೆಂದು ಮಾನ್ಯ ನ್ಯಾಯವಾದಿಗಳು ಪ್ರಾರ್ಥಿಸಿರುತ್ತಾರೆ.

8. ಎಮ್.ಎಫ್.ಎ.ಸಂ .2383/2013 ರಲ್ಲಿ ಕ್ಲೇಮುದಾರರ-ಅಪೀಲುದಾರರಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದ ಹಿನ್ನೆಲೆಯಲ್ಲಿ, ಮೇಲೆ ಹೇಳಿದಂತೆ, ಮೃತನು-ದೀಪಂಕರ್ ಸೀಲ್, ದಿನಾಂಕ 11.07.2011 ರಂದು ರಸ್ತೆ ಅಪಘಾತದಲ್ಲಿ ಮರಣ ಹೊಂದಿದರು ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿರುವುದಿಲ್ಲ ಎಂದು ಹೇಳುವುದು ಪ್ರಸಕ್ತವಾಗಿರುತ್ತದೆ.ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳಾದ ದೂರು, ಎಫ್.ಐ.ಆರ್, ಪಂಚನಾಮೆ, ವರದಿ, ಮಹಜರು ಪಂಚನಾಮೆ, ಐ.ವಿ.ಎಮ್. ವರದಿ, ಐ.ಎಮ್. ವರದಿ ಮುಂತಾದವುಗಳು ಕ್ಲೇಮು ಅರ್ಜಿಗೆ ಸಮರ್ಥನೆ ನೀಡಿರುತ್ತವೆ.ಮೃತನು ತನ್ನ ಮೋಟಾರು ಸೈಕಲ್ಲನ್ನು ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ಲಾರಿಗೆ ಡಿಕ್ಕಿ ಹೊಡೆದಿದ್ದಾನೆ ಎಂಬ ಅಂಶದ ದೃಷ್ಟಿಯಲ್ಲಿ, ಎಮ್.ಎಫ್.ಎ. ಸಂ .4448/2013 ರಲ್ಲಿ ಅಪೀಲುದಾರ ಇನ್ಶುರೆನ್ಸ್ ಕಂಪನಿಯ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಸಮರ್ಥನೆಯನ್ನು ಗುರುತಿಸಿರುತ್ತೇನೆ.ಆದ್ದರಿಂದ, ನ್ಯಾಯಾಧಿಕರಣವು, ಮೃತನ ಕಡೆಯಿಂದ ಶೇಕಡ 20 ರಷ್ಟು ನಿರ್ಲಕ್ಷ್ಯವಾಗಿದೆ ಎಂದು ನಿಗದಿ ಮಾಡಿದ ನಿರ್ಣಯಕ್ಕೆ ಹಸ್ತಕ್ಷೇಪ ಮಾಡಲು ಯಾವುದೇ ಆಧಾರವನ್ನು ನಾವು ಕಂಡಿರುವುದಿಲ್ಲ ಮತ್ತು ಅದು ಯಾವುದೇ ಹಸ್ತಕ್ಷೇಪವನ್ನು ಕೋರುವುದಿಲ್ಲ.

ಆದರೆ, ಎಮ್.ಎಫ್.ಎ.ಸಂ .2383/2013 ಕ್ಲೇಮುದಾರರು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದಂತೆ, ಸರ್ವೋಚ್ಚ ನ್ಯಾಯಾಲಯದ ಪ್ರಣಯ್ ಸೇಥಿ (ಮೇಲೆ ಹೇಳಿದ) ಪ್ರಕರಣದ್ದಲಿನ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ನ್ಯಾಯಾಧಿಕರಣವು ಭವಿಷ್ಯತ್ತಿನ ನಿರೀಕ್ಷಣೆಗಳಿಗೆ ಸಂಬಂಧಪಟ್ಟಂತೆ ಆತನ ಆದಾಯಕ್ಕೆ ಶೇಕಡ 10 ರಷ್ಟನ್ನು ಸೇರಿಸಬೇಕಿತ್ತು.ಆದ್ದರಿಂದ, 15,000/-ರೂಪಾಯಿಗಳಿಗೆ ಶೇಕಡ 10 ನ್ನು ಸೇರಿಸಿದಾಗ, ಆದಾಯವು 16,500/-ರೂಪಾಯಿಗಳಾಗುತ್ತದೆ.ಮುಂದುವರಿದು, ಸದರಿ ಆದಾಯದಲ್ಲಿ ಆತನ ವೈಯಕ್ತಿಕ ವೆಚ್ಚಗಳಿಗೆ ಮೂರನೇ ಒಂದು ಭಾಗವನ್ನು ಕಡಿತ ಮಾಡಿದಾಗ, ಆದಾಯವು 11,000/ರೂಪಾಯಿಗಳಾಗುತ್ತದೆ.ಆದ್ದರಿಂದ, 11,000/-ರೂಪಾಯಿಗಳ ಆದಾಯದೊಂದಿಗೆ ಮತ್ತು ನ್ಯಾಯಾಧಿಕರಣವು ಅಳವಡಿಸಿಕೊಂಡಿರುವ ' 9'ರ ಗುಣಕದೊಂದಿಗೆ, 0 ನ್ಯಾಯಾಧಿಕರಣವು ಅವಲಂಬನೆಯ ನಷ್ಟದ ' ಸಂಬಂಧದಲ್ಲಿ 10,80,000/ರೂಪಾಯಿಗಳ ಪರಿಹಾರದ ಪ್ರತಿಯಾಗಿ 11,88,000/- (11,000 x12x9) ರೂಪಾಯಿಗಳ ಪರಿಹಾರ ನೀಡಬೇಕಾಗುತ್ತದೆ.

9. ಸರ್ವೋಚ್ಚ ನ್ಯಾಯಾಲಯವು, ನ್ಯಾಷನಲ್ ಇನ್ಶುರೆನ್ಸ್ ಕಂಪನಿ ಅಮಿಟೆಡ್ ವಿರುದ್ಧ ಪ್ರಣಯ್ ಸೇಥಿ (ಮೇಲಿನ) ಪ್ರಕರಣದಲ್ಲಿ ನೀಡಿರುವ ತೀರ್ಪಿನ ದೃಷ್ಟಿಯಲ್ಲಿ, ' ಸಾಂಪ್ರದಾಯಿಕ ಶೀರ್ಷಿಕೆ'ಯ ಅಡಿಯಲ್ಲಿ

ನೀಡಿದ ಪರಿಹಾರವು 70,000/ರೂಪಾಯಿಗಳನ್ನು ಮೀರಬಾರದು ಅಥವಾ 70,000/-ರೂಪಾಯಿಗಳಿಗಿಂತ ಕಡಿಮೆಯಿರಬಾರದು.ಆದಾಗ್ಯೂ, ಪ್ರಸ್ತುತ ಪ್ರಕರಣದಲ್ಲಿ, ವಿವಿಧ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಕೇವಲ 40,000/-ರೂಪಾಯಿಗಳ ಮೊತ್ತವನ್ನು ಮಾತ್ರ ನೀಡಲಾಗಿದೆ.ಆದ್ದರಿಂದ, ಪರಿಹಾರವನ್ನು ನಾಲ್ಕು ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಒಟ್ಟಾರೆಯಾಗಿ 30,000/-ರೂಪಾಯಿಗಳನ್ನು ಹೆಚ್ಚಿಸಿದರೆ, ಎಲ್ಲಾ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಒಟ್ಟು ಪರಿಹಾರವು 70,000/ರೂಪಾಯಿಗಳಾಗುತ್ತದೆ.

10. ಮುಂದುವರಿದು, ಅಪೀಲುದಾರರು-ಕ್ಲೇಮುದಾರರ ಪರವಾದ ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದಂತೆ, ಮ್ಯಾಗ್ಮಾ ಜನರಲ್ ಇನ್ಸುರೆನ್ಸ್ ಕಂ. ಅಮಿಟೆಡ್ –ವಿರುದ್ಧ-ನಾನು ರಾಮ್, ಪ್ರಕರಣದಲ್ಲಿನ ಅವಲಂಬನೆಯ ಪ್ರಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೃತನ ಅಕಾಲಿಕ ಸಾವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೃತನ ಮಗಳಾದ ಅಪೀಲುದಾರ ಸಂಖ್ಯೆ 2 ಕ್ಕೆ, ಎಮ್.ಎಫ್.ಎ. ಸಂ .2383/2013 ರಲ್ಲಿ 66 ಪೋಷಕತ್ವದ.ನಷ್ಟ " ವನ್ನು ಮಂಜೂರು ಮಾಡುವುದು ನ್ಯಾಯಯುತವಾದುದು ಮತ್ತು ಯುಕ್ತವಾದುದು ಎಂಬುದನ್ನು ನಾನು ಗುರುತಿಸಿದ್ದೇನೆ.ಸದರಿ ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:

" ಪೋಷಕರ ನೆರವು, ರಕ್ಷಣೆ, ವಾತ್ಸಲ್ಯ, ಸಮಾಜ, ಶಿಸ್ತು, ಮಾರ್ಗದರ್ಶನ ಮತ್ತು ತರಬೇತಿಯ ನಷ್ಟಕ್ಕಾಗಿ, ತಂದೆಯ ಅಕಾಲಿಕ ಮರಣವಾದಾಗ ಪೋಷಕತ್ವದ ನಷ್ಟವನ್ನು ಮಗುವಿಗೆ ನೀಡಲಾಗುವುದು."

ಸದರಿ ನಿಯಮಕ್ಕೆ ಅನುಸಾರವಾಗಿ, ನಾವು, ಈ ಮೂಲಕ, " ಪೋಷಕತ್ವದ ನಷ್ಟ " ಎಂಬ ಶೀರ್ಷಿಕೆಯ ಅಡಿಯಲ್ಲಿ ಅಪೀಲುದಾರಸಂಖ್ಯೆ: 2 ಕ್ಕೆ 40,000/ರೂಪಾಯಿಗಳ ಮೊತ್ತವನ್ನು ನೀಡುತ್ತೇನೆ.

11. ಮೇಲೆ ನಡೆಸಲಾದ ಚರ್ಚೆ ಮತ್ತು ಬದಲಾದ ಸಂಗತಿಗಳ ದೃಷ್ಟಿಯಲ್ಲಿ, ಪರಿಹಾರವನ್ನು ಈ ಕೆಳಗಿನಂತೆ ಪುನಃ ಲೆಕ್ಕಹಾಕಲಾಗಿದೆ:

<table>
<tr><th>ವಿವರಗಳು</th><th>ಮೋಟಾರು ವಾಹನಗಳ ಅಪಘಾತ ಕ್ಲೇಮುಗಳ ನ್ಯಾಯಾಧೀಕರಣ ನೀಡಿದ ಪರಿಹಾರ</th><th>ಈ ನ್ಯಾಯಾಲಯವು ಹೆಚ್ಚಿಸಲಾದ ಪರಿಹಾರ</th><th>ಒಟ್ಟು</th></tr>
<tr><td>ಅವಲಂಬನೆಯ ನಷ್ಟ</td><td>10,80,000</td><td>1,08,000</td><td>11,88,000</td></tr>
<tr><td>ದಾಂಪತ್ಯದ ನಷ್ಟ</td><td>10,000</td><td rowspan="4">30,000</td><td rowspan="4">70,000</td></tr>
<tr><td>ಪ್ರೀತಿ ಮತ್ತು ವಾತ್ಸಲ್ಯದ ನಷ್ಟ</td><td>10,000</td></tr>
<tr><td>ಅಂತ್ಯ ಸಂಸ್ಕಾರದ ವೆಚ್ಚಗಳು</td><td>10,000</td></tr>
<tr><td>ಸಂಪದದ ನಷ್ಟ</td><td>10,000</td></tr>
</table>

| | | | |
|---|---|---|---|
| ವೈದ್ಯಕೀಯ ವೆಚ್ಚಗಳು | 3,06,836 | ಇಲ್ಲ | 3,06,836 |
| ಎಮ್.ಎಫ್.ಎ. ಸಂಖ್ಯೆ 2383/2013 ರಲ್ಲಿ ಅಪೀಲುದಾರರಿಗೆ ನೀಡಲಾದ ' ಪೋಷಕತ್ವದ ನಷ್ಟ | ಇಲ್ಲ | 40,000 | 40,000 |
| ಒಟ್ಟು | 14,26,836 | 1,78,000 | 16,04,836 |
| ವಿಮಾದಾರನು ಪಾವತಿಸಬೇಕಾದ ಪರಿಹಾರ 12,83,869/- ರೂಪಾಯಿಗಳು (ನಿರ್ಲಕ್ಷ್ಯಕ್ಕಾಗಿ ಪರಿಹಾರದ ಶೇಕಡ 20 ರಷ್ಟನ್ನು ಕಡಿತಗೊಳಿಸಿದ | | | |

ಆದ್ದರಿಂದ, ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ, ಕ್ಲೈಮುದಾರರು/ಅಪೀಲುದಾರರು ಎಮ್.ಎಫ್.ಎ.ಸಂ .2383/2013 ರಲ್ಲಿ, ನ್ಯಾಯಾಧಿಕರಣವು ನೀಡಿದ 14,26,836/-ರೂಪಾಯಿಗಳ ಪರಿಹಾರಕ್ಕೆ ಪ್ರತಿಯಾಗಿ ಒಟ್ಟು 16,04,836/ರೂಪಾಯಿಗಳ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.ಹೆಚ್ಚಿಸಲಾದ ಪರಿಹಾರವು 1,78,000/-ರೂಪಾಯಿಗಳಾಗಿರುತ್ತದೆ.

ಆದಾಗ್ಯೂ, ನ್ಯಾಯಾಧಿಕರಣದಿಂದ ಅಳವಡಿಸಿಕೊಂಡ ಶೇಕಡ 20 ರಷ್ಟು ನಿರ್ಲಕ್ಷ್ಯವನ್ನು ಕಡಿತಗೊಳಿಸುತ್ತಾ, ಕ್ಲೈಮುದಾರರು, ನ್ಯಾಯಾಧಿಕರಣ ಮತ್ತು ಈ ನ್ಯಾಯಾಲಯವು ಪರಿಹಾರ ಹೆಚ್ಚಿಸಿ ನೀಡಿದ ಶೇಕಡ 80 ರಷ್ಟು ಪರಿಹಾರಕ್ಕೆ ಮಾತ್ರ ಹಕ್ಕುಳ್ಳವರಾಗತಕ್ಕದ್ದು.ಆದ್ದರಿಂದ ಎಮ್.ಎಫ್.ಎ.ಸಂ .2383/2013 ರಲ್ಲಿ ಅಪೀಲುದಾರರು, ಒಟ್ಟು 12,83,869/-ರೂಪಾಯಿಗಳ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿದ್ದು, ಅದು ನೀಡಿದ ಒಟ್ಟು ಪರಿಹಾರ ಮೊತ್ತದ ಶೇಕಡ 80 ರಷ್ಟು ಮೊತ್ತವಾಗಿರುತ್ತದೆ.

ತದನುಸಾರವಾಗಿ, ನಾನು ಈ ಮುಂದಿನಂತೆ ಆದೇಶ ಹೊರಡಿಸಿರುತ್ತೇನೆ.

ಆದೇಶ

ಎಮ್.ಎಫ್.ಎ.ಸಂ .2383/2013 ನ್ನು ಭಾಗಶಃ ಅಂಗೀಕರಿಸಲಾಗಿದೆ, ನ್ಯಾಯಾಧಿಕರಣವು, ಎಂ.ವಿ.ಸಿ.ಸಂಖ್ಯೆ:7633/2011 ರಲ್ಲಿ ದಿನಾಂಕ 15.12.2012 ರಂದು ನೀಡಲಾದ ಪ್ರಶ್ನಿತ ತೀರ್ಪ ಮತ್ತು ಐತೀರ್ಪನ್ನು ಈ ಮೂಲಕ ಮಾರ್ಪಾಡು ಮಾಡಲಾಗಿದೆ.ಕ್ಲೇಮುದಾರರು/ಅಪೀಲುದಾರರು, ಎಮ್.ಎಫ್.ಎ.ಸಂಖ್ಯೆ: 2383/2013 ರಲ್ಲಿ, ಅರ್ಜಿ ಹಾಕಿದ ದಿನಾಂಕದಿಂದ ನಗದೀಕರಣದ ದಿನಾಂಕದವರೆಗೆ, ವಾರ್ಷಿಕ ಶೇಕಡ 6 ರಷ್ಟು ಬಡ್ಡಿದರದೊಂದಿಗೆ 12,83,869/-ರೂಪಾಯಿಗಳ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.ಎಮ್.ಎಫ್.ಎ.ಸಂಖ್ಯೆ: 4448/2013 ರಲ್ಲಿನ ಅಪೀಲುದಾರ-ವಿಮಾದಾರರು, ಈ ತೀರ್ಪಿನ ಪ್ರತಿಯನ್ನು ಪಡೆದುಕೊಂಡ ದಿನಾಂಕದಿಂದ 6 ವಾರಗಳೊಳಗಾಗಿ, ಸಂಪೂರ್ಣ ಪರಿಹಾರ ಮೊತ್ತವಾದ 12,83,869/-ರೂಪಾಯಿಗಳನ್ನು ಬಡ್ಡಿ ದರದೊಂದಿಗೆ ನ್ಯಾಯಾಧಿಕರಣದ ಮುಂದೆ ಠೇವಣಿ ಮಾಡತಕ್ಕದ್ದು ಮತ್ತು ಅಂತಹ ಠೇವಣಿಯನ್ನು ಮಾಡಿದ ನಂತರ, ಅದನ್ನು ಕ್ಲೇಮುದಾರರಿಗೆ, ಸೂಕ್ತ ಗುರುತಿನ ಆಧಾರದ ಮೇಲೆ, ಪಾವತಿಸತಕ್ಕದ್ದು, ಠೇವಣಿಯಲ್ಲಿ ಈಗಾಗಲೇ ಇರುವ ಯಾವುದೇ ಮೊತ್ತವನ್ನು ಸರಿದೂಗಿಸತಕ್ಕದು.ಮುಂದುವರಿದು, ಈ ನ್ಯಾಯಾಲಯದದಲ್ಲಿ ಠೇವಣಿಯಿಡುವ ಯಾವುದೇ ಮೊತ್ತವನ್ನು

ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ರವಾನೆ ಮಾಡತಕ್ಕದು.ಆದಾಗ್ಯೂ, ಪ್ರಶ್ನೆತ ತೀರ್ಪು ಮತ್ತು ಐತೀರ್ಪು, ಬಡ್ಡಿ ದರ, ಠೇವಣಿ ಮತ್ತು ಭಾಗ ಮಾಡುವಿಕೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.

ವಿಮಾ ಕಂಪೆನಿಯು ಸಲ್ಲಿಸಿದ ಎಮ್.ಎಫ್.ಎ.ಸಂಖ್ಯೆ: 4448/2013 ನ್ನು ತಿರಸ್ಕರಿಸಲಾಗಿದೆ.

ಎಲ್.ಸಿ.ಆರ್ನ್ನು ತಕ್ಷಣವೇ ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು.

ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.ತದನುಸಾರವಾಗಿ, ಡಿಗ್ರಿ ಮಾಡಲಾಗಿದೆ.